ವಿದ್ಯಾಭ್ಯಾಸದ ಇಲಾಖೆ.

ತಾರೀಖು 21ನೇ ಮಾಹೆ ಆಗಸ್ಟ್ 1890ನೇ ಇಸವಿ.

ಸ್ ೯ 1891ನೇ ಇಸವಿ ಫೆಬ್ರವರೀ ತಿಂಗಳಲ್ಲಿ ನಡೆಯತಕ್ಕ ಮೈಸೂರು ದೇಶೀಯ ವಿದ್ಯಾರ್ಥಿಗಳ ಪರೀಕ್ಷೆಗೆ ಬಾಲಕಿಯರು, ಪರೀಕ್ಷಾ ಗ್ರಂಥವಾದ ಪದ್ಯಸಾರದಲ್ಲಿ ನೇಮಿಸಲ್ಪಟ್ಟಿರುವ ಭಾಗಗಳಿಗೆ ಬದಲಾಗಿ ಸಾವಿತ್ರೀ ಚರಿತ್ರೆಯನ್ನು, ಅಥವಾ ಕಾವ್ಯ ಪುಂಜವನ್ನು ಸಂಪೂರ್ಣವಾಗಿ ಪರೀಕ್ಷಾ ಗ್ರಂಥವಾಗಿ ತೆಗದುಕೊಳ್ಳಬಹುದೆಂಬ ಇಸ್ತಿಹಾರ್ ನಾಮೆಯನ್ನನುಸರಿಸಿ, ಕಂಠಪಾಠಕ್ಕಾಗಿ ನಿಷ್ಕರ್ಷೆ ಮಾಡಿರುವ ಭಾಗಗಳು ಇದರಡೀಕಂಡಂತೆ ಪ್ರಕಟಿಸಲ್ಪಟ್ಟಿರುತ್ತವೆ: —

ಕಾವ್ಯ ಪುಂಜ.....ಪದ್ಯಗಳು 81—92 ಮತ್ತು 125—153.
ಸಾವಿತ್ರೀ ಚರಿತ್ರೆ .....ಮೂರನೇ ಆಶ್ವಾಸದಲ್ಲಿ ಪದ್ಯಗಳು 22—32 ಮತ್ತು ಐದನೇ ಆಶ್ವಾಸದಲ್ಲಿ ಪದ್ಯಗಳು 10—36.

ಹೆಚ್. ಜೆ. ಭಾಭಾ,
ಎಜ್ಯುಕೇಷನ್ ಸೆಕ್ರೆಟರಿ.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

ಮೈಸೂರು ಕಿಲ್ಲೆಯಲ್ಲಿ ಇರುವ ಅಳಿಯಂದರು ಮಹಾರಾಜೇಶ್ರೀ ಚಿಕ್ಕಲಿಂಗರಾಜೆ ಅರಸಿನವರು ತಮ್ಮ ಬಾಬತು ಮೈಸೂರು ತೀ ಮೆಯಲ್ಲಿ ಇರುವ ಯಲ್ಲಾ ಜಮೀನುಗಳ ಆಡಳಿತಗಳನ್ನೂ ನಡಿಸತಕ್ಕ ಬಗ್ಗೆ ಮೈಸೂರು ದೇವೀರಾಂಬಾ ಅಗ್ರಹಾರದಲ್ಲಿ ಇರುವ ಬೆಟ್ಟದ ಪುರದ ಶ್ರೀಕಂಠಯ್ಯನವರಿಗೆ ತಾವು 1884ನೇ ಇಸವಿ ಮಾರ್ಚಿ ತಿಂಗಳು 19ನೇ ತಾರೀಖಿನಲ್ಲಿ ಬರದುಕೊಟ್ಟಿರುವ ಒಟ್ಟು ಮೊಕ್ತ್ಯಾರ್ ನಾಮೆ ಯಂಬ ಜನರಲ್ ಪವರ್ ಆಫ್ ಅಟರ್ನಿಯನ್ನು 1890ನೇ ಇಸವಿ ಆಗಸ್ಟ್ 14ನೇ ತಾರೀಖು ಲಾಗಾಯಿತು ರದ್ದು ಮಾಡಿ ಇರುತ್ತಾರೆ.

ಆದ್ದರಿಂದ ಡಿಟೋ ಪವರ್ ಆಫ್ ಅಟರ್ನಿಯ ಅಧಿಕಾರದ ಮೇಲೆ ಆ ತಾರೀಖು ಲಾಗಾಯಿತು ಡಿಟೋ ಶ್ರೀಕಂಠಯ್ಯನವರು ನಡಿಸುವ ಯಾವದೊಂದು ಕೆಲಸಕ್ಕೂ ಮೇಲ್ಕಂಡ ಮಹಾರಾಜೇಶ್ರೀ ಚಿಕ್ಕಲಿಂಗರಾಜೇ ಅರಸಿನವರು ಬದ್ಧರಾಗುವದಿಲ್ಲ, ಮತ್ತು ಜವಾಬ್ದಾರರೂ ಅಲ್ಲ.

ಮೈಸೂರು,
ತಾರೀಖು 20ನೇ ಆಗಸ್ಟ್ 1890ನೇ ಇಸವಿ.

ಬಿ. ಬಸವರಾಜ್ಯ, ಬಿ. ಎ. ಬಿ. ಎಲ್.
ಅಡ್ವೊಕೇಟ್.